ಜೀವನಕ್ಕಾಗುವ ಪ್ರಯೋಜನವೇನು? ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ನಮಗಿರುವ ಸೀಮಿತ ಸಮಯದಲ್ಲಿ ಓದಲು ಕೈಹಿಡಿಯುವ ಪುಸ್ತಕಗಳ ಆಯ್ಕೆಯ ಪ್ರಕ್ರಿಯೆ ಸರಳವಾದದ್ದಲ್ಲ. ಈ ನಿಟ್ಟಿನಲ್ಲಿ ನಮ್ಮ ಹಿನ್ನೆಲೆಗಿಂತ ತೀರಾ ಭಿನ್ನವಾದ ಸಂದರ್ಭದಿಂದ ಬೆಳೆದುಬಂದ ಜನರ ತುಮುಲ ಮತ್ತು ಆಯ್ಕೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಅನುಕೂಲವಾದಂತಹ - ಬೇರೊಬ್ಬರು ಜೀವನದಲ್ಲಿ ಕೈಗೊಳ್ಳುವ ಆಯ್ಕೆಯ ಕಷ್ಟಗಳನ್ನು ಅರಿಯುವ ಪುಸ್ತಕಗಳನ್ನು ಓದುವುದರಿಂದ ಆಗಬಹುದಾದ ಲಾಭ ಅನನ್ಯವಾದದ್ದು. ನನ್ನ ಈಚಿನ ಓದಿನಲ್ಲಿ ವೈ.ಬಿ. ಸತ್ಯನಾರಾಯಣ ಅವರ 'ಮೈ ಫಾದರ್ ಬಾಲಯ್ಯ' ಒಂದು ಮುಖ್ಯ ಪುಸ್ತಕ ಎಂದು ನನಗನ್ನಿಸುತ್ತದೆ. ರೈಲ್ವೇ ಕಾಲನಿಯಲ್ಲಿ ಬೆಳೆದ ಒಂದು ದಲಿತ ಕುಟುಂಬಕ್ಕೆ ಸಂದ ಸತ್ಯನಾರಾಯಣ ಒಂದು ಖಾಸಗಿ ಸ್ವಾಯತ್ತ ವಿದ್ಯಾಸಂಸ್ಥೆಯ ಮುಖ್ಯಸ್ಥರಾಗಿ ಬೆಳೆದುಬರಲು ಪಟ್ಟ ಸಾಹಸ, ಅವರ ಮುಂದಿದ್ದ ಆಯ್ಕೆಗಳು, ಮಧ್ಯಮ ವರ್ಗದ ಸುಬ್ಬಾರಾವು ಮುಂದಿದ್ದ ಆಯ್ಕೆಗಳಿಗಿಂತ ಎಷ್ಟು ಭಿನ್ನವಾಗಿದ್ದುವು ಎನ್ನುವುದು ನಮಗೆ ತಿಳಿಯುತ್ತದೆ. ಹಾಗೇ ಸುಜಾತಾ ಗಿಡ್ಲ ಅವರ 'ಆಂಟ್ಸ್ ಎಮಂಗ್ ಎಲಿಫೆಂಟ್ಸ್' ಎನ್ನುವ ಪುಸ್ತಕ ದಲಿತ ಹಿನ್ನೆಲೆಯ- ಕ್ರೈಸ್ತ ಮತಕ್ಕೆ ಮತಾಂತರವಾದ- ಕ್ರಾಂತಿಕಾರಿ ಚಳವಳಿಯಲ್ಲಿ ಪಾಲ್ಗೊಂಡ ಸಂಸಾರದಲ್ಲಿನ ಏರುಪೇರು,ಅಲ್ಲಿ ಸಿಗುವ ಆಯ್ಕೆಗಳನ್ನು ದಾಖಲಿಸುತ್ತದೆ. ಅದೂ, ಮಧ್ಯಮವರ್ಗದ ಏರುಪೇರುಗಳಿಲ್ಲದ ಸ್ಥಿರ ಮತ್ತು ಸ್ಥಾಯಿ ಆಯ್ಕೆಗಳಿಗಿಂತ ಭಿನ್ನವಾಗಿರುತ್ತದೆ.

ನಮ್ಮ ಜೀವನದ ಮೇಲೆ ದೊಡ್ಡ ಪ್ರಭಾವ ಬೀರುವ ಜಾಗದಲ್ಲಿದ್ದ, ರಾಜಕೀಯವಾಗಿ ಪ್ರಬಲರಾಗಿದ್ದ ಆತ್ಮಕಥೆಗಳನ್ನು ಓದುವುದೂ ಕುತೂಹಲದ ವಿಷಯವೇ. ದೊಡ್ಡ ವ್ಯವಸ್ಥೆಯಲ್ಲಿ ಕೆಲಸ ಮಾಡುವಾಗ ಎಷ್ಟರ ಮಟ್ಟಿಗೆ ನಾಯಕರು ತಮ್ಮ ವೈಯಕ್ತಿಕ ಛಾಪುಗಳನ್ನು ಬಿಡಬಹುದು ಮತ್ತು ಎಷ್ಟರ ಮಟ್ಟಿಗೆ ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಳ್ಳಬೇಕಾಗಬಹುದು ಎನ್ನುವುದು ಆಸಕ್ತಿಯ ವಿಷಯ. ಹೊರಗೆ ಕೂತು ಹುದ್ದೆಯನ್ನು ಆಕ್ರಮಿಸಿರುವವರ ಟೀಕೆ ಮಾಡುವುದು ಸಹಜವೇ. ಆದರೆ ಹುದ್ದೆಯನ್ನಲಂಕರಿಸಿದಾಗ ಸಿಗಬಹುದಾದ ಒಳನೋಟ, ಮಾಹಿತಿ, ಸಾರ್ವಜನಿಕ ಮಾಡಲು ಸಾಧ್ಯವಿಲ್ಲದ ವಿಷಯಗಳ ಹಿನ್ನೆಲೆಯಲ್ಲಿ ನಾಯಕರೂ ವಿಚಿತ್ರ ಬಂಧನಕ್ಕೊಳಗಾಗಿ ತಮ್ಮ ಮಾತನ್ನು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಬರಾಕ್ ಒಬಾಮ ಬರೆದಿರುವ 'ಎ ಪ್ರಾಮಿಸ್ಡ್ ಲ್ಯಾಂಡ್' ಆಸಕ್ತಿಯ ಪುಸ್ತಕ. ಕಪ್ಪು ಜನಾಂಗದ ಪ್ರತಿನಿಧಿಯಾಗಿ ಕೆಲಸ ಮಾಡುವುದಕ್ಕೂ ಅಮೆರಿಕದ ಅಧ್ಯಕ್ಷರಾದಾಗ ತೋರಿಸಬೇಕಾದ ತಟಸ್ಥ ನಿಲುವಿಗೂ ಇರುವ ದ್ವಂದ್ವ ಅನೇಕ ಸಂದರ್ಭಗಳಲ್ಲಿ ಕಾಣಿಸುತ್ತದೆ. ಯಾರಾದರೂ ವಿಪರೀತ ಪ್ರತಿಭಟಿಸಿ ರಾದ್ಧಾಂತ ಮಾಡುತ್ತಿದ್ದರೆ ಅವರಿಗೆ ಕೊಡಬಹುದಾದ ಅತ್ಯಂತ ಸಶಕ್ತ ಶಿಕ್ಷೆಯೆಂದರೆ, ತೀರ್ಮಾನ ಮಾಡುವ ಉನ್ನತ ಜಾಗದಲ್ಲಿ ಅಧಿಕಾರ ಕೊಟ್ಟು ಕೂಡಿಸುವುದು. ಅಲ್ಲಿ ಕೂತ ಕೂಡಲೇ ಆ ಸ್ಥಾನದ ಸಾಧ್ಯತೆಗಳೇನು ಎನ್ನುವುದರ ಅರಿವಾದರೂ, ಅದಕ್ಕಿಂತ ಹೆಚ್ಚಾಗಿ ಅದರ ಮಿತಿಗಳೇನು ಎನ್ನುವುದೂ ಅರ್ಥವಾಗುತ್ತದೆ. ಹೀಗಾಗಿ ಜನರು ಯಾವ ಚೌಕಟ್ಟಿನಲ್ಲಿ ತಮ್ಮ ವೃತ್ತಿಯನ್ನು ನಿಭಾಯಿಸುತ್ತಾರೆ ಎಂದು ತಿಳಿಯಲೂ ಆತ್ಮಕಥೆಗಳು ಪೂರಕವಾಗುತ್ತವೆ.

ಸುಬ್ಬಾರಾವು ಪುಸ್ತಕದಲ್ಲಿನ ಒಂದು ಮಾತು ಮಹತ್ವದ್ದಾಗಿತಟ್ಟುತ್ತದೆ.ಏನಾದರೂಕಷ್ಟಕಾರ್ಪಣ್ಯಗಳು ಬಂದಾಗ, "ಓಹ್ ದೇವರೇ, ಈ ಕಷ್ಟಗಳು ನನಗೇ ಏಕೆ ಬರುತ್ತಿವೆ? ವೈ? ಎಂದು ನಮಗನ್ನಿಸುವುದು ಸಹಜವೇ. ಆದರೆ ಅನಪೇಕ್ಷಿತವಾದ ಯಶಸ್ಸು ಬಂದಾಗ, ಅದು ನಮ್ಮ ಪರಿಶ್ರಮ ಮತ್ತು ಪ್ರತಿಭೆಯ ಕಾರಣವಾಗಿ ಬಂದಿತೆಂದು ಪರಿಗಣಿಸುತ್ತೇವೆಯೇ ಹೊರತು, ದೇವರನ್ನು ಈ ಸಂದರ್ಭದಲ್ಲಿ 'ನಾನೇ ಏಕೆ' ಎನ್ನುವ ಪ್ರಶ್ನೆ ಕೇಳುವುದಿಲ್ಲ." ಹೀಗಾಗಿ ಬೇರೊಬ್ಬರು ತಮ್ಮ ಯಶೋಗಾಥೆ ಬರೆಯುವಾಗ, ಆ ಜಾಗದಲ್ಲಿ ನಾವು ಇದ್ದಿರಬಹುದು ಎನ್ನುವುದನ್ನು ಊಹಿಸಿಕೊಳ್ಳಬೇಕು. ಇಲ್ಲ, ನಮ್ಮ ಪ್ರಯತ್ನವಿದ್ದೂ, ಶ್ರಮವಿದ್ದೂ, ಅಪೇಕ್ಷಿಸಿದ್ದನ್ನು ಸಾಧಿಸಲಾರದ ಚಡಪಡಿಕೆಯನ್ನು ಒಂದು ಮಟ್ಟದಲ್ಲಿ ಸ್ಥಿತಪ್ರಜ್ಞರಾಗಿ ಕಾಣಬೇಕು. ಸುಬ್ಬಾರಾವು ಜೀವನದಲ್ಲಿ ಈ ರೀತಿಯ ಸಾಕಷ್ಟು ಏರುಪೇರುಗಳು ಕಾಣಿಸುವುದರಿಂದ ಅದು ನಮ್ಮ ಎದುರಿರುವ ಏರುಪೇರುಗಳಿಗೆ ಸಮಾನವಾಗಿ ನಿಲ್ಲುತ್ತವೆ. ಹೀಗಾಗಿ ಆತನೂ ನಮ್ಮೊಳಗಿನ ಒಬ್ಬ ಸಾಮಾನ್ಯವ್ಯಕ್ತಿಯೇ ಅಂತ ಅನ್ನಿಸುತ್ತದೆ. ●